ಕರ್ನಾಟಕ ಸರ್ಕಾರ
ಅರಣ್ಯ ಇಲಾಖೆ

# ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಆಯ್ಕೆ ಪ್ರಾಧಿಕಾರ ಶಿವಮೊಗ್ಗ ವೃತ್ತ, ಶಿವಮೊಗ್ಗ

**ಅಧಿಸೂಚನೆ ಸಂಖ್ಯೆ:ಎ1:ಸಿಬ್ಬಂದಿ:ಅ.ವೀಕ್ಷಕ:ನೇನೇಮಕಾತಿ:ಸಿಆರ್-18/2023-24**
**ದಿನಾಂಕ: 16-09-2023**

## ಪ್ರಕಟಣೆ

ಈ ಕಛೇರಿ ಪ್ರಕಟಣೆ ದಿನಾಂಕ: 14-02-2024 ನ್ನು ಮುಂದುವರೆಸುತ್ತಾ, ಅರಣ್ಯ ಇಲಾಖೆಯಲ್ಲಿ ಖಾಲಿ ಇರುವ 30 ಅರಣ್ಯ ವೀಕ್ಷಕ ಹುದ್ದೆಗಳಿಗೆ ಸರ್ಕಾರದ ಅಧಿಸೂಚನೆ ಸಂಖ್ಯೆ: FEE 203 FEG 2015 ದಿನಾಂಕ: 06-08-2019ರ ಕರ್ನಾಟಕ ಅರಣ್ಯ ಇಲಾಖಾ ಸೇವೆಗಳು (ನೇಮಕಾತಿ) (ತಿದ್ದುಪಡಿ) ನಿಯಮಗಳು, 2019ರನ್ವಯ ಅಧಿಸೂಚನೆ ಸಂಖ್ಯೆ: ಎ1:ಸಿಬ್ಬಂದಿ:ಅ.ವೀಕ್ಷಕ:ನೇನೇಮಕಾತಿ:ಸಿಆರ್-18/2023-24 ದಿನಾಂಕ: 16-09-2023 ರಂತೆ 30 ಅರಣ್ಯ ವೀಕ್ಷಕ ಹುದ್ದೆಗಳಿಗೆ 1:20 ತಾತ್ಕಾಲಿಕ ಆಯ್ಕೆಪಟ್ಟಿಯನ್ನು ಪ್ರಕಟಿಸಲಾಗಿರುತ್ತದೆ ಹಾಗೂ ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾದ 1:20 ತಾತ್ಕಾಲಿಕ ಆಯ್ಕೆಪಟ್ಟಿಯ ಕುರಿತು ಯಾವುದಾದರೂ ಆಕ್ಷೇಪಣೆ ಇದ್ದಲ್ಲಿ, ಈಗಾಗಲೇ ಅರ್ಜಿಸಲ್ಲಿಸಿರುವ ಅರ್ಹಅಭ್ಯರ್ಥಿಗಳು ಮಾತ್ರ ನಿಗದಿತ ನಮೂನೆಯಲ್ಲಿ ಸ್ಪಷ್ಟ ರೀತಿಯಲ್ಲಿ ಆಕ್ಷೇಪಣೆಯನ್ನು ವಿವರಿಸಿ ಈ ಕಛೇರಿಯ ಇ-ಮೇಲ್ "ccfsmgfw@gmail.com"/ ಗೆ ದಿನಾಂಕ: 14.02.2024 ರಿಂದ 20.02.2024 ರೊಳಗೆ ಆಕ್ಷೇಪಣೆಗಳನ್ನು ಸಲ್ಲಿಸಲು ಕಾಲಾವಕಾಶವನ್ನು ನೀಡಲಾಗಿರುತ್ತದೆ.

**ಈ ಮೇಲಿನಂತೆ ನಿಗದಿಪಡಿಸಿದ ದಿನಾಂಕ:** 14.02.2024 ರಿಂದ 20.02.2024 **ರ ಅವಧಿಯಲ್ಲಿ 1:20 ತಾತ್ಕಾಲಿಕ ಆಯ್ಕೆ ಪಟ್ಟಿಯ ಕುರಿತು ಅಭ್ಯರ್ಥಿಗಳಿಂದ ಆಕ್ಷೇಪಣೆಗಳು ಸ್ವೀಕೃತವಾಗಿದ್ದು,** ಆಕ್ಷೇಪಣೆಗಳಿಗೆ ಇಲಾಖೆಯ ಉತ್ತರಗಳನ್ನು ಹಾಗೂ 30 ಅರಣ್ಯ ವೀಕ್ಷಕ ಹುದ್ದೆಗಳಿಗೆ ದಿನಾಂಕ: 14-02-2024 ರಂದು ಪ್ರಕಟಿಸಿದ 1:20 ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಅಂತಿಮಗೊಳಿಸಿ ಇಲಾಖಾ ಅಧಿಕೃತ ಇಲಾಖಾ ವೆಬ್‌ಸೈಟ್‌ನಲ್ಲಿ ಈಗಾಗಲೇ ಪ್ರಕಟಿಸಲಾಗಿರುತ್ತದೆ.

ಮುಂದುವರೆದು ಈಗಾಗಲೇ ಪ್ರಕಟಿಸಲಾದ 1:20 ಅಂತಿಮ ಆಯ್ಕೆ ಪಟ್ಟಿಯಲ್ಲಿನ ಅಭ್ಯರ್ಥಿಗಳಿಗೆ, ದೈಹಿಕ ತಾಳ್ವಿಕೆ ಪರೀಕ್ಷೆ, ದೈಹಿಕ ಕಾರ್ಯ ಸಮರ್ಥತೆ ಪರೀಕ್ಷೆ ಮತ್ತು ಮೂಲ ದಾಖಲೆಗಳ ಪರೀಕ್ಷೆ ದಿನಾಂಕಗಳನ್ನು ಈ ಕೆಳಕಂಡಂತೆ ನಿಗದಿಪಡಿಸಲಾಗಿದೆ. ಸದರಿ ದಿನಾಂಕಗಳಂದು ಎಲ್ಲಾ ಅಭ್ಯರ್ಥಿಗಳು ಗುರುತಿನ ಚೀಟಿ, ಇತ್ತೀಚಿನ 3 ಭಾವಚಿತ್ರಗಳು ಹಾಗೂ ಮೂಲ ದಾಖಲೆಗಳ ಎರಡು ಜೆರಾಕ್ಸ್ (ಗೆಜೆಟೆಡ್ ಅಧಿಕಾರಿಗಳಿಂದ ದೃಢೀಕರಿಸಿದ) ಪ್ರತಿಗಳನ್ನು ಹಾಜರುಪಡಿಸಬೇಕಿದ್ದು, ಈ ಎಲ್ಲಾ ದಾಖಲೆಗಳು ಹಾಗೂ ಮೂಲ ದಾಖಲೆಗಳೊಂದಿಗೆ ದಿನಾಂಕ:29-02-2024 ರಂದು ಬೆಳಿಗ್ಗೆ 6.00 ಗಂಟೆಗೆ ನೆಹರು **ಕ್ರೀಡಾಂಗಣ, ಶಿವಮೊಗ್ಗ, ಇಲ್ಲಿ ಹಾಜರಾಗ ಬೇಕಾಗಿರುತ್ತದೆ.** ಈ ಎಲ್ಲಾ ಪ್ರಕ್ರಿಯೆಗಳು 4 – 5 ದಿನಗಳು ನಡೆಯುವ ಸಾಧ್ಯತೆ ಇರುವುದರಿಂದ ಎಲ್ಲಾ ಪೂರ್ವ ಸಿದ್ಧತೆಗಳನ್ನು ಅಭ್ಯರ್ಥಿಗಳೇ ಮಾಡಿಕೊಂಡು, ಸ್ವಂತ ಖರ್ಚಿನಲ್ಲೇ ಸದರಿ ಪರೀಕ್ಷೆಗಳಿಗೆ ನಿಗದಿತ ದಿನಾಂಕ ಮತ್ತು ಸಮಯದಂದು **"ನೆಹರು ಕ್ರೀಡಾಂಗಣ, ಶಿವಮೊಗ್ಗ, ಇಲ್ಲಿ** ಹಾಜರಾಗಲು ಸೂಚಿಸಿದೆ.

| ಕ್ರ. ಸಂ. | ದಿನಾಂಕ ಮತ್ತು ಸಮಯ | ಪರೀಕ್ಷೆಗಳು | ಹಾಜರಾಗಬೇಕಾದ ಅಭ್ಯರ್ಥಿಗಳ ಸಂಖ್ಯೆ |
|---|---|---|---|
| 1 | 29-02-2024 ಬೆಳಿಗ್ಗೆ 6.00 ರಿಂದ ಮುಕ್ತಾಯದವರೆಗೆ | 1. ದೈಹಿಕ ತಾಳ್ವಿಕೆ ಪರೀಕ್ಷೆ [Physical Endurance Test] *[ಸದರಿ ದೈಹಿಕ ಪರೀಕ್ಷೆಗಳಿಗೆ ಭಾಗವಹಿಸುವ ಅಭ್ಯರ್ಥಿಗಳು ಸೂಕ್ತ ಸಿದ್ಧತೆ ಮಾಡಿಕೊಂಡು ಹಾಜರಾಗುವುದು.]* | **503** *[ಆಯಾ ದಿನದ ಪರೀಕ್ಷೆಗಳಲ್ಲಿ ಅರ್ಹತೆ ಹೊಂದಿದ ಅಭ್ಯರ್ಥಿಗಳ ಪಟ್ಟಿಯನ್ನು ಅದೇ ದಿನ ಪರೀಕ್ಷಾ ಕೇಂದ್ರದ ಬಳಿ ಸೂಚನಾ ಫಲಕದಲ್ಲಿ ಪ್ರಕಟಿಸಲಾಗುವುದು]* |

| | | | |
|---|---|---|---|
| 2 | 01.03.2024<br>ಬೆಳಿಗ್ಗೆ 6.00 ರಿಂದ ಮುಕ್ತಾಯದವರೆಗೆ | 1. ದೈಹಿಕ ತಾಳ್ವಿಕೆ ಪರೀಕ್ಷೆ [Physical Endurance Test]<br>2. ದೈಹಿಕ ಕಾರ್ಯ ಸಮರ್ಥತೆ ಪರೀಕ್ಷೆ [Physical Efficiency Test] *(ದೈಹಿಕ ತಾಳ್ವಿಕೆ ಪರೀಕ್ಷೆಯಲ್ಲಿ ಅರ್ಹತೆ ಹೊಂದಿದವರಿಗೆ ಮಾತ್ರ ).*<br>*3.* ವೈದ್ಯಕೀಯ ಪರೀಕ್ಷೆ [Medical Test] *(ದೈಹಿಕ ಕಾರ್ಯ ಸಮರ್ಥತೆ ಪರೀಕ್ಷೆಯಲ್ಲಿ ಅರ್ಹತೆ ಹೊಂದಿದವರಿಗೆ ಮಾತ್ರ ).*<br>*[ಸದರಿ ದೈಹಿಕ ಪರೀಕ್ಷೆಗಳಿಗೆ ಭಾಗವಹಿಸುವ ಅಭ್ಯರ್ಥಿಗಳು ಸೂಕ್ತ ಸಿದ್ಧತೆ ಮಾಡಿಕೊಂಡು ಹಾಜರಾಗುವುದು.]* | |
| 3 | 02-03-2024<br>ಬೆಳಿಗ್ಗೆ 7.00 ಗಂಟೆಗೆ | *1.* ವೈದ್ಯಕೀಯ ಪರೀಕ್ಷೆ [Medical Test] *(ದೈಹಿಕ ಕಾರ್ಯ ಸಮರ್ಥತೆ ಪರೀಕ್ಷೆಯಲ್ಲಿ ಅರ್ಹತೆ ಹೊಂದಿದವರಿಗೆ ಮಾತ್ರ ).* | |
| 5 | 03-03-2024 | ಸಾರ್ವತ್ರಿಕ ರಜೆ | |
| 6 | 04-03-2024<br>ಬೆಳಿಗ್ಗೆ 7.00 ಗಂಟೆಗೆ | *1.* ವೈದ್ಯಕೀಯ ಪರೀಕ್ಷೆ [Medical Test] *(ದೈಹಿಕ ಕಾರ್ಯ ಸಮರ್ಥತೆ ಪರೀಕ್ಷೆಯಲ್ಲಿ ಅರ್ಹತೆ ಹೊಂದಿದವರಿಗೆ ಮಾತ್ರ ).* | ವೈದ್ಯಕೀಯ ಪರೀಕ್ಷೆಯಲ್ಲಿ ಅರ್ಹತೆ ಹೊಂದಿದ ಅಭ್ಯರ್ಥಿಗಳ ಪಟ್ಟಿಯನ್ನು ಶಿವಮೊಗ್ಗ ವೃತ್ತ ಕಛೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲಾಗುವುದು |
| 7 | 05-03-2024<br>ಬೆಳಿಗ್ಗೆ 10.00 ಗಂಟೆಯಿಂದ ಮುಕ್ತಾಯದವರೆಗೆ<br>[**ಸ್ಥಳ**:-ಶಿವಮೊಗ್ಗ ವೃತ್ತ ಕಛೇರಿಯ ಶ್ರೀಗಂಧ ಸಭಾಂಗಣ] | 1. ಮೂಲ ದಾಖಲಾತಿಗಳ ಪರಿಶೀಲನೆ [Original Document Verification] | ದಿನಾಂಕ: 04-03-2024 ರಂದು ಪ್ರಕಟಿಸಲಾದ ವೈದ್ಯಕೀಯ ಪರೀಕ್ಷೆಯ ಅರ್ಹತೆ ಪಟ್ಟಿಯಲ್ಲಿರುವ ಅಭ್ಯರ್ಥಿಗಳ ಮೂಲ ದಾಖಲಾತಿಗಳ ಪರಿಶೀಲನೆ ನಡೆಸಲಾಗುವುದು |
| 8 | ಈ ಎಲ್ಲಾ ಪ್ರಕ್ರಿಯೆ ಮುಗಿದ ನಂತರ ಮೆರಿಟ್ ಲೀಸ್ಟ್ ಮತ್ತು ಆಯ್ಕೆ ಪಟ್ಟಿಯನ್ನು ಇಲಾಖಾ ಅಧಿಕೃತ ಜಾಲತಾಣದಲ್ಲಿ (Website) ಪ್ರಕಟಿಸಲಾಗುವುದು | | |

**ಸೂಚನೆ:**

*1. ಅಭ್ಯರ್ಥಿಗಳ ವೈದ್ಯಕೀಯ ಪರೀಕ್ಷೆಯನ್ನು ಜಿಲ್ಲಾ ಮೆಗ್ಗಾನ್ ಬೋಧನ ಆಸ್ಪತ್ರೆ ಶಿವಮೊಗ್ಗ ಇಲ್ಲಿ ನಡೆಸಲು ವ್ಯವಸ್ಥೆ ಏರ್ಪಡಿಸಲಾಗಿದ್ದು, ಪರೀಕ್ಷಾ ಕೇಂದ್ರದಲ್ಲಿ ನೀಡುವ ಸೂಚನೆಗಳಂತೆ ನಿಗಧಿಪಡಿಸಿದ ಸಮಯ ಮತ್ತು ಸ್ಥಳದಲ್ಲಿ ಕಡ್ಡಾಯವಾಗಿ ಹಾಜರಾಗತಕ್ಕದ್ದು*

*2. ನಿಗದಿತ ದಿನಾಂಕ ಮತ್ತು ಸಮಯದಂದು ನಿಗಧಿಪಡಿಸಿದ ಪರೀಕ್ಷೆಗಳಿಗೆ ಭಾಗವಹಿಸದೇ ಇದ್ದಲ್ಲಿ ಅಭ್ಯರ್ಥಿಯ ಅಭ್ಯರ್ಥಿತ್ವ ಸ್ವಯಂ ಚಾಲಿತವಾಗಿ ರದ್ದಾಗುತ್ತದೆ ಹಾಗೂ ಈ ಕುರಿತು ಯಾವುದೇ ರೀತಿಯ ಪತ್ರ ವ್ಯವಹಾರಕ್ಕೆ ಅವಕಾಶವಿರುವುದಿಲ್ಲ.*

*3. ಅಭ್ಯರ್ಥಿಗಳು ಆನ್‌ಲೈನ್ ಅರ್ಜಿಯಲ್ಲಿ ದಾಖಲಿಸಿರುವ ಮಾಹಿತಿಯನ್ನು ಮಾತ್ರ ಆಧರಿಸಿ ಅಂತಿಮ 1:20 ಆಯ್ಕೆ ಪಟ್ಟಿಯನ್ನು ತಯಾರಿಸಿ ಈ ಮೇಲಿನ ಪರೀಕ್ಷೆಗಳಿಗೆ ಭಾಗವಹಿಸಲು ಅನುಮತಿಸಲಾಗಿದ್ದು, ಸದರಿ ಪರೀಕ್ಷೆಗಳಲ್ಲಿ ಭಾಗವಹಿಸಿದ ಮಾತ್ರಕ್ಕೆ ಆಯ್ಕೆಯಾಗಿರುವುದಾಗಿ ಭಾವಿಸಬಾರದಾಗಿ ಸ್ಪಷ್ಟಪಡಿಸಿದೆ. ಅಭ್ಯರ್ಥಿಗಳು ಸಲ್ಲಿಸಿರುವ ಮಾಹಿತಿ/ದಾಖಲೆ/ಪ್ರಮಾಣ ಪತ್ರಗಳು ಇವಕ್ಕೆ ಸಂಬಂದಪಟ್ಟ ಪ್ರಾಧಿಕಾರಿಗಳಿಂದ ಅವುಗಳ ನೈಜತೆಗೊಳ್ಳುವ ದೃಢೀಕರಣದ ಷರತ್ತಿಗೆ ಒಳಪಟ್ಟಿರುತ್ತವೆ. ಅಲ್ಲದೆ, ಯಾವುದೇ ಹಂತದಲ್ಲಿ ಅಭ್ಯರ್ಥಿಯ ಅನರ್ಹತೆ ಖಚಿತವಾದಲ್ಲಿ, ಅಭ್ಯರ್ಥಿಯ ಆಯ್ಕೆಯನ್ನು ರದ್ದು ಪಡಿಸುವ ಅಧಿಕಾರವನ್ನು ಆಯ್ಕೆ ಪ್ರಾಧಿಕಾರ ಹೊಂದಿರುತ್ತದೆ.*

*4. ಅರಣ್ಯ ಇಲಾಖೆಯ ಅಧಿಕೃತ ವೆಬ್‌ಸೈಟ್ https://aranya.gov.in/ ರಲ್ಲಿ ನೇಮಕಾತಿ (Recruitment) ಶೀರ್ಷಿಕೆಯಡಿ ಪ್ರಕಟಿಸಲಾಗುತ್ತಿರುವ ಮಾಹಿತಿಯನ್ನು ಅಭ್ಯರ್ಥಿಗಳು ಕಾಲಕಾಲಕ್ಕೆ ವೀಕ್ಷಿಸುವುದು. ಇದಕ್ಕಾಗಿ ಬೇರೆ ಯಾವುದೇ ಪತ್ರವ್ಯವಹಾರ ಮಾಡಲಾಗುವುದಿಲ್ಲ.*

5. ಮೂಲ ದಾಖಲಾತಿ ಪರಿಶೀಲನೆಯಲ್ಲಿ ಅಧಿಸೂಚನೆಯ ಖಂಡಿಕೆ 11 ರಲ್ಲಿ ವಿವರಿಸಿದಂತೆ ಅಭ್ಯರ್ಥಿಗಳು ದಾಖಲಾತಿ/ಪ್ರಮಾಣಪತ್ರಗಳನ್ನು ಕಡ್ಡಾಯವಾಗಿ ಹಾಜರುಪಡಿಸತಕ್ಕದ್ದು.

6. ಉಳಿದಂತೆ ಅರಣ್ಯ ವೀಕ್ಷಕ ಹುದ್ದೆಯ ನೇಮಕಾತಿ ಅಧಿಸೂಚನೆಯಲ್ಲಿ ಪರೀಕೆಗಳಿಗೆ ಹಾಜರಾಗುವ ಅಭ್ಯರ್ಥಿಗಳಿಗೆ ನೀಡಿದ ಸೂಚನೆಗಳು ಮತ್ತು ಟಿಪ್ಪಣಿಗಳನ್ನು ಎಚ್ಚರಿಕೆಯಿಂದ ಓದಿಕೊಂಡು ಹಾಜರಾಗುವುದು. ನಂತರ ಪರೀಕ್ಷಾ ಕೇಂದ್ರದಲ್ಲಿ ಆಯ್ಕೆ ಪ್ರಾಧಿಕಾರದ ವತಿಯಿಂದ ಆಗಿಂದಾಗ್ಗೆ ನೀಡಲಾಗುವ ಸೂಚನೆಗಳನ್ನು ಪಾಲಿಸತಕ್ಕದ್ದು.

ದಿನಾಂಕ:23.02.2024

ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
ಹಾಗೂ ಆಯ್ಕೆ ಪ್ರಾಧಿಕಾರಿ,
ಶಿವಮೊಗ್ಗ ವೃತ್ತ, ಶಿವಮೊಗ್ಗ